**Code No.: 208 NS**

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

Malleshwaram, Bengaluru–560003.

## ಕರ್ನಾಟಕ ಮುಕ್ತ ಶಾಲೆ ಪರೀಕ್ಷೆ, ಮೇ- 2024

## Karnataka Open School Examination, May - 2024

**MODEL QUESTION PAPER / ಮಾದರಿ ಪ್ರಶ್ನೆ ಪತ್ರಿಕೆ**

| | | |
|---|---|---|
| Subject / ವಿಷಯ | : | **First Language - KANNADA**<br>**ಪ್ರಥಮ ಭಾಷೆ – ಕನ್ನಡ** |
| Maximum Marks / ಗರಿಷ್ಠ ಅಂಕಗಳು | : | 125 |
| Duration of Exam / ಪರೀಕ್ಷೆ ಅವಧಿ | : | 3 hours / 3 ಗಂಟೆಗಳು |
| Time allotted to read the instructions / ಸೂಚನೆಗಳನ್ನು ಓದಲು ನಿಗಧಿಗೊಳಿಸಿರುವ ಅವಧಿ | : | 15 minutes / 15 ನಿಮಿಷಗಳು |

**ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು / *General Instructions to the Candidates:***

1. ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿ ಮುದ್ರಿಸಿರುವಂತೆಯೇ ಉತ್ತರ–ಪುಸ್ತಿಕೆಯಲ್ಲಿ ನೀಡಿರುವ ನಿಗದಿತ ಸ್ಥಳದಲ್ಲಿ ಸ್ಪಷ್ಟವಾಗಿ ಬರೆಯ ತಕ್ಕದ್ದು.

   Candidate should write their Register Number on the Answer Booklet as printed in their hall ticket.

2. ಅಭ್ಯರ್ಥಿಯು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ, ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ಮುಖ್ಯ ಉತ್ತರ–ಪುಸ್ತಿಕೆಯ ಕ್ರಮ ಸಂಖ್ಯೆಯನ್ನು ಬರೆಯತಕ್ಕದ್ದು.

   Candidate should write their Main Answer Booklet Number on the additional answer sheets in the space provided.

3. ಅಭ್ಯರ್ಥಿಗಳು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೋಂದಣಿ ಸಂಖ್ಯೆ, ಗುರುತು ಹಾಗೂ ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ–ಪುಸ್ತಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ–ಪುಸ್ತಿಕೆಯನ್ನು ಮೌಲ್ಯ ಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

   Candidates should not write Register Number, mark, sign or any other information in the Answer Booklet except in the specified place. In case, it is found any information in the sheets of the answer scripts such answer scripts will not be considered for evaluation.

4. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ–ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

   Candidate found to be indulged in malpractice during examination and violating examination instructions, action will be taken against such candidate as per the examination rules and his/her answer booklet will not be considered for evaluation.

5. ಉತ್ತರ ಬರೆಯಲು ಕಪ್ಪು / ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸತಕ್ಕದ್ದು.

   Use black / blue ball point pen only to write the answers.

[ Turn over

***ಸೂಚನೆಗಳು :*** i) ಎಲ್ಲಾ ಪ್ರಶ್ನೆಗಳ ಉತ್ತರಗಳನ್ನು ಉತ್ತರ–ಪುಸ್ತಿಕೆಯಲ್ಲಿಯೇ ಬರೆಯಿರಿ.

ii) ಪ್ರಶ್ನೆ ಮತ್ತು ಉಪ–ಪ್ರಶ್ನೆಗಳ ಸಂಖ್ಯೆಯನ್ನು ಸರಿಯಾಗಿ ಬರೆಯಿರಿ.

**I. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಒಂದೊಂದು* ಪದದಲ್ಲಿ ಉತ್ತರಿಸಿ : 5 × 1 = 5**

1) ನುಡಿಯದಂತೆ ನಡೆಯದಿದ್ದರೆ ಯಾರು ಒಲಿಯುವುದಿಲ್ಲ ?

2) ಅನುಗಾಲವು ಯಾವುದಕ್ಕೆ ಚಿಂತೆ ?

3) ಶರಣರ ಗುಣವನ್ನು ಯಾವುದರಲ್ಲಿ ನೋಡಬೇಕು ?

4) 'ಗೌರೀಶಂಕರ ಬಚಾವೊ' ಎಂದವರು ಯಾರು ?

5) ಕೋಟಿ ವಿದ್ಯೆಗಳಲ್ಲಿ ಯಾವ ವಿದ್ಯೆ ಲೇಸು ?

**II. ಕೆಳಗೆ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ : 5 × 1 = 5**

6) ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಗಳ ಸಂಖ್ಯೆ ______________

7) ರಾಜನ ಮಗನಿಗೆ 'ಮಾತನಾಡುವ ಅಡಿಕೆ ನೆಗಾಡುವ ಎಲೆ' ಎಂಬ ಹುಡುಗಿಯರು ದೊರೆತದ್ದು ______________ .

8) ಸುಯೋಧನ ಎಂದರೆ ______________ .

9) ಕಂದ ಪದ್ಯದಲ್ಲಿ ಒಟ್ಟು ______________ ಮಾತ್ರೆಗಳು ಬರುತ್ತವೆ.

10) ಪಂಪನು ______________ ನಾಡಿನ ವರ್ಣನೆ ಮಾಡಿದ್ದಾನೆ.

**III. ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ : 5 × 1 = 5**

11) ನಂಟರು, ಸಮಾಲೋಕನ, ಪಕ್ಷಿಕಾಶಿ, ಭಾರತೀಯ ಕಾವ್ಯಮೀಮಾಂಸೆ

12) ಕರ್ವಾಲೋ, ಚಿದಂಬರ ರಹಸ್ಯ, ನಿಗೂಢ ಮನುಷ್ಯರು, ದುರ್ಗಾಸ್ತಮಾನ

13) ಭೀಮಸೇನ, ಮಂಡೋದರಿ, ರಾವಣ, ಸೀತಾದೇವಿ

14) ಕವಿ, ಯಮ, ಹಂಸ, ಜಾತ್ರೆ

15) ಇಳೆ, ಭೂಮಿ, ಗಾಳಿ, ಪೃಥ್ವಿ

**IV. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ : 5 × 1 = 5**

16) ಕುಪ್ಪಸ : ರವಿಕೆ : : ಅಕ್ಕರೆ : ______________

17) ಚಂದ್ರೋದಯ : ಗುಣಸಂಧಿ : : ಏಕೈಕ : ______________

18) ನಾಲ್ಮೊಗ : ದ್ವಿಗು ಸಮಾಸ : : ಕೃಷ್ಣಾರ್ಜುನರು : ______________

19) ರಾಮನಾಥ : ದೇವರ ದಾಸಿಮಯ್ಯ : : ಚನ್ನಮಲ್ಲಿಕಾರ್ಜುನ : ______________

20) ದಾನ ಚಿಂತಾಮಣಿ : ಅತ್ತಿಮಬ್ಬೆ : : ನಂದಾದೀವಿಗೆ : ______________

**V. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 5 × 1 = 5**

21) ಕಥಾ ನಾಯಕನಿಗೆ ಬೇಕಾಗಿದ್ದ ಹುಡುಗಿ

(ಅ) ಬಡ ಹುಡುಗಿಯಾದರೂ ಬುದ್ಧಿವಂತಳು

(ಆ) ಕುರೂಪಿಯಾದರೂ ಶ್ರೀಮಂತಳು

(ಇ) ಲಂಡನ್ನಿನಲ್ಲಿ 'ಲಾ' ಓದಲು ಖರ್ಚು ಕೊಡಬಲ್ಲ ಹುಡುಗಿ

(ಈ) ಅತಿ ಸುಂದರ ಹುಡುಗಿ

22) ಶಿಸ್ತಿನ ಸಿಪಾಯಿಗಳೆಂದರೆ

(ಅ) ದಾರಿಹೋಕರು

(ಆ) ಕೆಲಸಗಾರರು

(ಇ) ನಾಗರೀಕರು

(ಈ) ಮುದುಕರು

23) ಕೆಂಪಯ್ಯನವರು ಬಂಗಾಳವನ್ನು ಪ್ರತಿನಿಧಿಸಿದ್ದ ವರ್ಷಗಳು

(ಅ) 5 ವರ್ಷಗಳು

(ಆ) 7 ವರ್ಷಗಳು

(ಇ) 2 ವರ್ಷಗಳು

(ಈ) 10 ವರ್ಷಗಳು

24) ಎಂ. ಗೋಪಾಲ ಕೃಷ್ಣ ಅಡಿಗರ ಊರು.

(ಅ) ಗದುಗಿನ ಕೋಳಿವಾಡ

(ಆ) ಧಾರವಾಡದ ಸಾಧನಕೇರಿ

(ಇ) ಮಾಲೂರಿನ ಮಾಸ್ತಿ

(ಈ) ದಕ್ಷಿಣ ಕನ್ನಡ ಜಿಲ್ಲೆಯ ಮೊಗೇರಿ

25) ಲಕ್ಷ್ಮೀಯು ಪ್ರೀತಿಯಿಂದ ಸಾಕಿದ್ದ ಸಾಕು ಪ್ರಾಣಿ

(ಅ) ಜಿಂಕೆಯ ಮರಿ

(ಆ) ಕೋತಿಯ ಮರಿ

(ಇ) ಬೆಕ್ಕಿನ ಮರಿ

(ಈ) ಕುರಿಯ ಮರಿ

**VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 5 × 1 = 5**

26) ಕವಿ ಅಂಬಿಕಾತನಯದತ್ತರವರು ಯಾವುದನ್ನು ಜೀವನ ಎನ್ನುತ್ತಾರೆ ?

27) ಲೇಖಕರಾದ 'ಅ.ರಾ. ಮಿತ್ರ'ರ ಪರಮ ಶತ್ರು ಯಾರು ?

28) ಕವಿಯು ಜಗವನ್ನೇ ಬೆಲೆ ಕಟ್ಟಿದ್ದು ಯಾವುದಕ್ಕೆ ?

29) ಕವಯಿತ್ರಿಯ ಕವಿತೆ ಕೆಲವರ ದೃಷ್ಟಿಯಲ್ಲಿ ಎಂಥದ್ದು ?

30) 'ಎಳೆಯ ನಿಂಬೆಯ ಕಾಯಿ' ಎಂದು ಮೇಷ್ಟರ ಹೆಂಡತಿ ಯಾರನ್ನು ಕುರಿತು ಹೇಳಿದಳು ?

**VII. ಕೆಳಗಿನ ವ್ಯಾಕರಣಾಂಶಗಳಿಗೆ ಸೂಚನೆಯಂತೆ ಉತ್ತರಿಸಿ.**

31) **ಕೆಳಗಿನ ಪದಗಳನ್ನು ಬಿಡಿಸಿ ಬರೆದು, ಸಂಧಿಯ ಹೆಸರನ್ನು ಬರೆಯಿರಿ : 2 × 1 = 2**

ಅ) ಮಹರ್ಷಿ

ಆ) ಅತ್ಯಂತ

32) **ಕೆಳಗಿನ ಪದಗಳನ್ನು ವಿಗ್ರಹ ವಾಕ್ಯಮಾಡಿ ಬರೆದು, ಸಮಾಸದ ಹೆಸರನ್ನು ಬರೆಯಿರಿ : 2 × 1 = 2**

ಅ) ತಲೆಯೆತ್ತು

ಆ) ಅರಮನೆ

33) **ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ :** **2 × 1 = 2**

ಅ) ಕನಕ

ಆ) ಬಲ್ಲಿದ

34) **ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ :** **2 × 1 = 2**

ಅ) ಚಿಂತೆ

ಆ) ನರಕ

35) **ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ :** **2 × 1 = 2**

ಅ) ಸಿಂಹಾಸನ

ಆ) ಉನ್ನತ

**VIII. ಕೆಳಗಿನ ಪದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** **4 × 1 = 4**

ಹುಡುಗನಾಗಿದ್ದಾಗ ಬೆಳಗಿನ ಜಾವ ಏಳುವುದು ಕಷ್ಟ ಎಂದು ನಾನು ಅಂದುಕೊಂಡಿರಲಿಲ್ಲ. ಇಂದಿಗೂ ಹಾಗೆಯೇ ಅಂದುಕೊಂಡಿದ್ದೇನೆ. ಏಳುವುದು ಬಹಳ ಸುಲಭ ಎಂದು ಯಾರಿಗೆ ಬೇಕಾದರೂ ಹೇಳಬಲ್ಲೆ. ಎಷ್ಟೋ ದಿನ ರಾತ್ರಿ ಮಲಗುವಾಗ ನಾನು ಬೆಳಗಿನ ಜಾವ ಏಳಬೇಕೆಂಬ ನಿರ್ಧಾರ ಮಾಡಿಕೊಂಡೇ ಮಲಗಿದ್ದೇನೆ. ಆದರೆ ಬೆಳಗಿನ ಜಾವದಲ್ಲಿ ಅದೇನು ಅನಿರೀಕ್ಷಿತ ಬದಲಾವಣೆ ಆಗಿರುತ್ತದೆಯೋ ಇನ್ನೂ ನನಗೆ ಅರ್ಥವಾಗಿಲ್ಲ. ಎಚ್ಚರಗೊಂಡ ಮನಸ್ಸು, ಸೋಮಾರಿಯಾದ ದೇಹ ಇವೆರಡಕ್ಕೂ ಸ್ವಲ್ಪಕಾಲ ಉಗ್ರ ಹೋರಾಟ ನಡೆಯುತ್ತಿರುತ್ತದೆ. ಎಚ್ಚರ ಖಂಡಿತ ಆಗಿರುತ್ತದೆ. ತಂದೆ ಎದ್ದು ದೀಪ ಹಾಕಿದ ವಿಷಯ ಗೊತ್ತು. ಅವರು ಕೂಗುತ್ತಿರುವುದೂ ಸ್ಪಷ್ಟವಾಗಿ ಕೇಳಿಸುತ್ತದೆ. ಎಲ್ಲಿ ಹತ್ತಿರ ಬಂದು ಹೊರಳಿಸುತ್ತಾರೋ ಎಂಬ ಭಯ ಹಾಗೂ ಎಷ್ಟೋ ಸಲ ಆಗಿದೆ. ಕೊನೆಗೆ ತಂದೆಯವರೇ 'ಹೋಗಲಿ ಪಾಪ ತುಂಬಾ ನಿದ್ರೆ ಇರಬೇಕು' ಎಂದು ಅಮ್ಮನೊಡನೆ ಹೇಳುತ್ತಿರುವುದೂ ಕೇಳಿಸುತ್ತದೆ. ಸದ್ಯ ಬದುಕಿದೆ ಎಂದು ಆನಂದದಿಂದ ಮುಸುಕೆಳೆದು ಕೊಳ್ಳುತ್ತೇನೆ.

***ಪ್ರಶ್ನೆಗಳು :***

36) ಯಾವುದನ್ನು ಬಹಳ ಸುಲಭ ಎಂದು ಹೇಳಬಹುದು ?

37) ಮಲಗುವಾಗ ಯಾವ ನಿರ್ಧಾರ ಮಾಡಿಕೊಂಡು ಮಲಗುತ್ತಾರೆ ?

38) ತಂದೆಯವರು ಅಮ್ಮನೊಡನೆ ಏನು ಹೇಳುತ್ತಾರೆ ?

39) ಎಚ್ಚರಗೊಂಡಾಗ ಯಾರ ಯಾರ ಮಧ್ಯೆ ಉಗ್ರ ಹೋರಾಟ ನಡೆಯುತ್ತದೆ ?

**IX. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 13 × 2 = 26**

40) ಭರತ ಭೂಮಿಯ ಸಿರಿ ಸಂಪತ್ತನ್ನು ತಿಳಿಸಿ.

41) ಕವಿಯು ತಮ್ಮ ಹೆಂಡತಿಯನ್ನು ಯಾವ ರೀತಿಯಲ್ಲಿ ನೆನಪಿಸಿಕೊಂಡಿದ್ದಾರೆ ?

42) ದ.ರಾ. ಬೇಂದ್ರೆಯವರು ಸಮರಸವೇ ಜೀವನವೆಂದು ಹೇಗೆ ಹೇಳಿದ್ದಾರೆ ?

43) ಸೀತೆ ಮತ್ತು ಶಾಂತಿಯರ ಗುಣಸ್ವಭಾವಗಳು ಹೇಗಿದ್ದವು ?

44) ಕೆಂಪಯ್ಯನವರು ಯಾವ ವಿದೇಶೀ ನಗರಗಳಲ್ಲಿ ಆಟವಾಡಿದ್ದಾರೆ ?

45) ತರುಣರು ಹೊಸ ಬಾಳನ್ನು ಹೇಗೆ ಪ್ರಾರಂಭಿಸುವರು ?

46) ಚಲುವೆಯನ್ನು ಕವಿ ತಮ್ಮಲ್ಲಿ ಉಳಿಸಿಕೊಂಡದ್ದು ಹೇಗೆ ?

47) ಕವಿತೆಗೆ ಯಾವ ಹಂಬಲವಿದೆ ?

48) ಮೇಷ್ಟರ ಹೆಂಡತಿಗೆ ಏಕೆ ಕೋಪ ಬಂದಿತು ?

49) ನನ್ನೂರಿನಲ್ಲಿ ವಿದ್ಯುಚ್ಛಕ್ತಿ ಯಾವ ರೀತಿಯ ಪ್ರಭಾವ ಬೀರಿದೆ ?

50) ಸರ್ಕಸ್ ಸಾಹಸ ಕಂಡಾಗ ಲೇಖಕರಿಗಾದ ಅನುಭವವೇನು ?

51) 'ಮರಣವೂ ಮಹಾನವಮಿ' ಎಂದರೇನು ?

52) 'ಓಝೋನ್' ಎಂದರೇನು ?

**X. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ, ಸಮನ್ವಯಗೊಳಿಸಿ : 1 × 3 = 3**

53) "ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು"

**XI. ಕೆಳಗಿನ ಕವಿಗಳು / ಸಾಹಿತಿಗಳಲ್ಲಿ ಯಾರಾದರೂ ನಾಲ್ವರ ಕಾಲ, ಜನ್ಮಸ್ಥಳ ಮತ್ತು ಒಂದು ಕೃತಿಯನ್ನು ಬರೆಯಿರಿ: 4 × 3 = 12**

54) ಕುಮಾರವ್ಯಾಸ

55) ರನ್ನ

56) ತೀ.ನಂ. ಶ್ರೀಕಂಠಯ್ಯ

57) ಪು.ತಿ.ನ.

58) ದ.ರಾ. ಬೇಂದ್ರೆ

**XII. ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ಎರಡನ್ನು ವಿಸ್ತರಿಸಿ ಬರೆಯಿರಿ : 2 × 3 = 6**

59) ಕಾಯಕವೇ ಕೈಲಾಸ

60) ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ

61) ದೇಶ ಸುತ್ತಿ ನೋಡು, ಕೋಶ ಓದಿ ನೋಡು

**XIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ *ಐದಕ್ಕೆ* ಆರೆಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 5 × 4 = 20**

62) 'ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು' ಎಂಬುದನ್ನು ಶಾಂತಿಯ ಆತ್ಮಹತ್ಯೆಯ ಕಾರಣದೊಂದಿಗೆ ವಿವರಿಸಿ.

63) ಹಾಸ್ಟೆಲ್‌ನಲ್ಲಿ ಲೇಖಕರು ಬೆಳಗಿನ ಜಾವ ಏಳುವುದರ ಕುರಿತು ಹೇಗೆ ವಿವರಿಸಿದ್ದಾರೆ ?

64) ಭಾವೈಕ್ಯತೆ ಕುರಿತು ಅಡಿಗರ ಆಶಯವೇನು ?

65) ನುಡಿಯ ಮಹತ್ವ ಕುರಿತು ಬಸವಣ್ಣನವರ ಸಂದೇಶವೇನು ?

66) 'ಹೊಲೆಗೆಡಿಸಿದ ಹಿಮಾಲಯ' ಎನ್ನಲು ಕಾರಣವೇನು ? ಇದರ ಕುರಿತು ಎಡ್ಮಂಡ್ ಹಿಲರಿ ಸಲಹೆ ಏನು ?

67) ಬನವಾಸಿಯ ಮೇಲಿನ ಪ್ರೀತಿಯನ್ನು ಪಂಪ ಹೇಗೆ ವರ್ಣಿಸಿದ್ದಾನೆ ?

**XIV. ಪದ್ಯಭಾಗದ ಸಾರಾಂಶವನ್ನು ಬರೆಯಿರಿ : 1 × 4 = 4**

68) ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ
ಸುಳಿದು ಸೂಸುವ ವಾಯು ನಿಮ್ಮ ದಾನ । ನಿಮ್ಮ
ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ಹೇಳಾ ರಾಮನಾಥ

**XV. ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ *ಒಂದನ್ನು* ಕುರಿತು ಸುಮಾರು ಹತ್ತು ವಾಕ್ಯಗಳ ಪ್ರಬಂಧವೊಂದನ್ನು ಬರೆಯಿರಿ: 1 × 5 = 5**

69) ಅ) ಚಂದ್ರಯಾನ–3
ಆ) ಪರಿಸರ ಜಾಗೃತಿ
ಇ) ರಾಷ್ಟ್ರೀಯ ಭಾವೈಕ್ಯತೆ

**XVI. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

70) ಅ) ನಿಮ್ಮ ಹೆಸರು 'ನವೀನ' ಎಂದು ಭಾವಿಸಿಕೊಂಡು ಶಾಲಾ ಪ್ರವಾಸಕ್ಕಾಗಿ ಹಣವನ್ನು ಕೇಳಿ ನಿಮ್ಮ ತಂದೆಗೆ ಪತ್ರ ಬರೆಯಿರಿ.
ಆ) ನಿಮ್ಮ ಶಾಲಾ ಮುಖ್ಯ ಶಿಕ್ಷಕರಿಗೆ 'ವರ್ಗಾವಣೆ' ಪತ್ರ ಕೇಳಿ ಕಾಗದ ಬರೆಯಿರಿ.

=============

DO NOT WRITE ANYTHING HERE